# ಸಾವಿರ ದಾಟಿದ ರಾಜ

ಇಳಯರಾಜ! ಸಾವಿರ ಸಿನಿಮಾಗಳಿಗೆ ಹಿನ್ನೆಲೆ ಸಂಗೀತ ನೀಡುವುದೆಂದರೆ ಸಣ್ಣ ಸಾಧನೆಯೇನಲ್ಲ. ಅದರಲ್ಲೂ ಸಂಗೀತ ನಿರ್ದೇಶನ ಮಾಡಿದ ಬಹುತೇಕ ಎಲ್ಲ ಹಾಡುಗಳೂ ವಿಭಿನ್ನವಾಗಿರುವಂತೆ ನೋಡಿಕೊಂಡು, ಎಲ್ಲ ಭಾಷೆಗಳ ಸಂಗೀತ ಪ್ರೇಮಿಗಳ ಮನ ಗೆಲ್ಲಲು ಅಗಾಧ ಪ್ರತಿಭೆಯೇ ಬೇಕು. ನಿಸ್ಸಂಶಯವಾಗಿಯೂ ಇಳಯರಾಜರ ಪ್ರತಿಭೆ ಮೇರುಮುಖಿ. ಅದಕ್ಕೆಂದೇ ಅವರು ದಕ್ಷಿಣ ಭಾರತದ ಅತ್ಯಂತ ಜನಪ್ರಿಯ ಸಂಗೀತ ನಿರ್ದೇಶಕ. ತಮಿಳು, ತೆಲುಗು, ಮಲಯಾಳಂ, ಕನ್ನಡ ಮಾತ್ರವಲ್ಲ ಹಿಂದಿ ಸಿನಿಮಾ ರಂಗದಲ್ಲೂ ಇಳಯರಾಜ ಸಂಗೀತದಿಂದ ನೂರಾರು ಸಿನಿಮಾಗಳು ಸೂಪರ್‌ಹಿಟ್ ಅನ್ನಿಸಿಕೊಂಡಿವೆ. ಅಮಿತಾಭ್ ಬಚ್ಚನ್ ಅಭಿನಯದ ಇನ್ನೇನು ಬಿಡುಗಡೆಯಾಗಲಿರುವ 'ಶಮಿತಾಭ್' ಚಿತ್ರಕ್ಕೆ ಇಳಯರಾಜ ನೀಡಿರುವ ಸಂಗೀತವನ್ನು ಬಿಡುಗಡೆ ಮಾಡಲು, ದಕ್ಷಿಣದ ಇಬ್ಬರು ಸೂಪರ್ ಸ್ಟಾರ್‌ಗಳಾದ ರಜನಿಕಾಂತ್ ಮತ್ತು ಕಮಲಹಾಸನ್ ಮುಂಬೈಗೆ ಧಾವಿಸಿದ್ದರೆಂದರೆ 'ರಾಜಾ ಸಾರ್' ಖ್ಯಾತಿ ಎಷ್ಟಿದೆಯೆಂದು ಗೊತ್ತಾಗುತ್ತದೆ.

ಬಡ ಕುಟುಂಬದಲ್ಲಿ ಹುಟ್ಟಿದ (ಬರ್ತ್‌ಡೇ 2/6/1943) ಇಳಯರಾಜ, ಚಿಕ್ಕಂದಿನಲ್ಲೇ ಸಂಗೀತವನ್ನು ದುಡಿಮೆಯ ಸಾಧನವನ್ನಾಗಿಸಿಕೊಂಡವರು. ಮಲಸೋದರನ ತಂಡದಲ್ಲಿ ಗಿಟಾರ್, ಹಾರ್ಮೋನಿಯಂ ನುಡಿಸುವುದರೊಂದಿಗೆ ವೃತ್ತಿ ಆರಂಭವಾಗಿತ್ತು. ಗೀತರಚನೆಕಾರ, ಸಂಗೀತ ನಿರ್ವಾಹಕನಾಗಿ ದುಡಿಮೆ ಆರಂಭಿಸಿ ಬಳಿಕ ನಿರ್ದೇಶಕನ ಸ್ಥಾನಕ್ಕೆ ಒಂದೊಂದೇ ಮೆಟ್ಟಿಲುಗಳನ್ನು ಏರಿದವರು. ತಂತ್ರಜ್ಞಾನ ಇನ್ನೂ ದೂರದ ಕನಸಾಗಿದ್ದ ಕಾಲದಲ್ಲಿ ಸಂಗೀತದ ರಾಗ, ತಾಳಗಳನ್ನು ಅರಗಿಸಿಕೊಂಡು, ಸೃಜನಾತ್ಮಕ ಸಾಹಸಗಳನ್ನು ಮಾಡಿದಾತ ಈ ರಾಜ. ಒಂದೆಡೆ ಬಾಲ್ಯದ ಹಳ್ಳಿಜೀವನದಿಂದಾಗಿ ಮನಹೊಕ್ಕ ತಮಿಳು ಜಾನಪದ ಹಾಡುಗಳು, ಇನ್ನೊಂದೆಡೆ ಅದೇ ತಾನೇ ದಕ್ಷಿಣದ ಸಂಗೀತ ಕ್ಷೇತ್ರಕ್ಕೆ ಕಾಲಿಡಲು ಯತ್ನಿಸಿದ್ದ ಪಾಶ್ಚಾತ್ಯ ಸಂಗೀತದ ಪ್ರಭಾವ– ಇಳಯರಾಜ ಎರಡನ್ನೂ ಒಗ್ಗೂಡಿಸಿಕೊಂಡು ಹೊಸ ಪ್ರಯೋಗಗಳನ್ನು ನಡೆಸಿದರು. ಜತೆಗೆ ಕರ್ನಾಟಕ ಸಂಗೀತದ ಸ್ಪರ್ಶವೂ ಅವರ ರಚನೆಗಳಿಗೆ ವಿಶಿಷ್ಟ ಹೊಳಪು ನೀಡಿತ್ತು.

ಇಳಯರಾಜ ಪಡೆದ ಪ್ರಶಸ್ತಿಗಳೂ ಇದನ್ನೇ ಸೂಚಿಸುತ್ತದೆ. ಒಟ್ಟು ನಾಲ್ಕು ಸಲ ರಾಷ್ಟ್ರ ಪ್ರಶಸ್ತಿ ಪಡೆದವರು ಇಳಯರಾಜ. 1984ರಲ್ಲಿ ತೆಲುಗು ಸಿನಿಮಾ 'ಸಾಗರ ಸಂಗಮಂ', 86ರಲ್ಲಿ ತೆಲುಗು ಸಿನಿಮಾ 'ಸಿಂಧುಭೈರವಿ', 89ರಲ್ಲಿ ತೆಲುಗು ಸಿನಿಮಾ ರುದ್ರವೀಣ– ಇವು ಮೂರೂ ಸಂಗೀತ ನಿರ್ದೇಶನಕ್ಕೆ. 2010ರಲ್ಲಿ ಮಲಯಾಳಂ ಚಿತ್ರ ಪಳಸ್ಸಿರಾಜಾದ 'ಅತ್ಯುತ್ತಮ ಹಿನ್ನೆಲೆ ಸಂಗೀತ'ಕ್ಕೆ ರಾಷ್ಟ್ರ ಪ್ರಶಸ್ತಿ ಬಂತು. ಈ ಎಲ್ಲ ಸಿನಿಮಾಗಳಲ್ಲೂ ಇಳಯರಾಜ ಅವರ ಶಾಸ್ತ್ರೀಯ ಸಂಗೀತ ಜ್ಞಾನವೇ ವಿಜೃಂಭಿಸಿದ್ದು. ಆದರೆ ಅದೇ ಇಳಯರಾಜ 1991ರಲ್ಲಿ 'ದಳಪತಿ' ತಮಿಳು ಸಿನಿಮಾಕ್ಕೆ ರಚಿಸಿ, ಸಂಗೀತ ನೀಡಿದ 'ರುಕ್ಕಮ್ಮಾ ಕೈ ತಟ್ಟು' ಎಂಬ ಹಾಡು, ಬಿಬಿಸಿ 2003ರಲ್ಲಿ ನಡೆಸಿದ ಜಗತ್ತಿನ ಸಾರ್ವಕಾಲಿಕ ಶ್ರೇಷ್ಠ 10 ಸಿನಿಮಾ ಹಾಡುಗಳಲ್ಲಿ 4ನೇ ಸ್ಥಾನ ಪಡೆದಿತ್ತು! ಈ ಪ್ರಶಸ್ತಿಗಳು ಇಳಯರಾಜ ಅವರ ಸಂಗೀತ ಜ್ಞಾನದ ಅಗಾಧ ವೈವಿಧ್ಯಕ್ಕೆ ಸಾಕ್ಷಿ.

ಲಂಡನ್ನಿನ ಟ್ರಿನಿಟಿ ಕಾಲೇಜಿನಲ್ಲಿ ಕ್ಲಾಸಿಕಲ್ ಗಿಟಾರ್‌ನಲ್ಲಿ ಚಿನ್ನದ ಪದಕ ಗಳಿಸಿದ ಇಳಯರಾಜ, ಪಾಶ್ಚಾತ್ಯ ಸಂಗೀತ ಸಂವೇದನೆಯನ್ನು ದಕ್ಷಿಣ ಭಾರತದ ಸಿನಿಮಾಗಳಿಗೆ ಮೊದಲು ಪರಿಚಯಿಸಿದವರು ಎನ್ನುವುದಂತೂ ನಿಸ್ಸಂಶಯ. ಮುಂದೆ ಎ.ಆರ್.ರೆಹಮಾನ್ ಇದನ್ನೇ ಇನ್ನಷ್ಟು ಉತ್ತುಂಗಕ್ಕೆ ಒಯ್ದರು. ರೆಹಮಾನ್ ಮತ್ತು ಇಳಯರಾಜ ಅವರಲ್ಲಿ ಯಾರು ಶ್ರೇಷ್ಠರು ಎಂಬ ಚರ್ಚೆ ಆಗಾಗ್ಗೆ ಅಭಿಮಾನಿಗಳ ನಡುವೆ ನಡೆಯುವುದಿದೆ. ರೆಹಮಾನ್ ತಂತ್ರಜ್ಞಾನವನ್ನೇ ಹೆಚ್ಚು ನೆಚ್ಚಿಕೊಂಡವರು. ಆದರೆ ಇಳಯರಾಜ ತಂತ್ರಜ್ಞಾನ ಇಷ್ಟು ಉತ್ಕರ್ಷಕ್ಕೆ ಏರದಿದ್ದ ಕಾಲದಲ್ಲಿ, ರಾಗ ಮತ್ತು ತಾಳಗಳನ್ನು ಹೆಚ್ಚು ದುಡಿಸಿಕೊಂಡವರು. 'ರಾಜಲಹರಿ' ಎಂಬ ಹೊಸ ರಾಗವನ್ನೂ ಹುಟ್ಟುಹಾಕಿದವರು. ಈಗಿನ ತಂತ್ರಜ್ಞಾನಪ್ರಿಯ ಹೊಸ ಜನಾಂಗಕ್ಕೂ ಇಳಯರಾಜರ ಸಂಗೀತ ಇಷ್ಟವಾಗಲು ಅವರ ಪ್ರಯೋಗಗಳೂ ಒಂದು ಕಾರಣ. ಹಾಗೆ ನೋಡಿದರೆ, ಒಂದು ಕಾಲದಲ್ಲಿ ಇಳಯರಾಜ ಸಂಗೀತ ನಿರ್ದೇಶನದಲ್ಲಿ ರೆಹಮಾನ್ ಗಿಟಾರ್ ನುಡಿಸಿದ್ದೂ ಉಂಟು.

ಕನ್ನಡದ ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್ ಅವರ ಜತೆ ಸಹಾಯಕರಾಗಿ ನೂರಕ್ಕೂ ಹೆಚ್ಚು ಚಿತ್ರಗಳಿಗೆ ದುಡಿದಿರುವ ಇಳಯರಾಜ, ಈಗ ಹೊಸಪೀಳಿಗೆಯ ಹಿಂದಿ ಚಿತ್ರ ನಿರ್ದೇಶಕರಿಗೂ ಅಚ್ಚುಮೆಚ್ಚು. ಹಾಗೆಂದೇ ಹಿಂದಿಯ ಯಶಸ್ವಿ ಚಿತ್ರ ನಿರ್ದೇಶಕ ಆರ್.ಬಾಲ್ಕಿ ತನ್ನ ಮೂರನೆಯ ಸಿನಿಮಾ 'ಶಮಿತಾಬ್'ಗೂ ಇಳಯರಾಜ ಅವರನ್ನೇ ನೆಚ್ಚಿಕೊಂಡಿದ್ದಾರೆ. (ಅವರ ಈ ಹಿಂದಿನ 'ಚೀನೀ ಕಮ್' ಮತ್ತು 'ಪಾ' ಸಿನಿಮಾಗಳಿಗೂ ಇಳಯರಾಜ ಅವರದ್ದೇ ಸಂಗೀತ.) ಕಮಲಹಾಸನ್ ಅವರಂತೂ ತಮ್ಮ ನೂರು ಚಿತ್ರಗಳಿಗೆ ಇಳಯರಾಜ ಅವರನ್ನೇ ನಂಬಿಕೊಂಡದ್ದು, 'ರಾಜಾ ಸಾರ್' ಅವರ ಸಂಗೀತದ ಉನ್ನತ ಗುಣಮಟ್ಟಕ್ಕೆ ಸ್ಪಷ್ಟಸಾಕ್ಷಿ. ■



Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65